(MR. SPEAKER)

"That clauses 2 to 14, both inclusive and the Schedule stand part of the Bill."

The motion was adopted.

Clauses 2 to 14, both inclusive, and the Schedule were added to the Bill.

Mr. SPEAKER.—The question is:

"That clause 1, the Preamble and the Title stand part of the Bill."

The motion was adopted.

Clause 1, the Preamble and the Title were added to the Bill.

Motion to pass.

Sri B. RACHIAH.—I move:

"That the Mysore Preservation of Private Forests Bill, 1962, be passed."

Mr. SPEAKER.—The question is:

"That the Mysore Preservation of Private Forests Bill, 1962, be passed."

The motion was adopted.

MOTION OF THANKS TO THE GOVERNOR'S ADDRESS.

Motion to consider.

Sri GANJI VEERAPPA (Harihar).—I beg to move:

"That we, the members of the Mysore Legislative Assembly assembled in this Session, beg leave to thank the Governor for the Address delivered to the Members of the Legislature on 15th March 1962."

Mr. SPEAKER.—Motion moved:

"That we, the members of the Mysore Legislative Assembly assembled in this Session beg leave to thank the Governor for the Address delivered to the Members of the Legislature on 15th March 1962."

Smt. BASAVARAJESWARI.—I second the motion.

Sri C. J. MUCKANNAPPA.—Let us take up the discussion on this motion on ehe 30th March 1962.

Mr. SPEAKER.—Does the Hon'ble Mover make his speech now ?

Sri GANJI VEERAPPA.—I leave it to the Hon'ble Speaker.

Sri VEERENDRA PATIL (Minister for Public Works).—There are twenty-five minutes more. I think the Hon'ble Member who moved the motion may not require more than half an hour to complete his speech. Let him initiate the discussion and it is open to the Hon'ble Members to continue the discussion.

Mr. SPEAKER.—The Mover will speak and after that we will adjourn. Now the position is this: amendments should have come by 26th. But we have received amendments later, and so it has not been possibe to print and circulate them. Either I will have to disallow them or the Members must agree that they do not press for printed copies. I will try to give copies of them as the debate progresses. But all the points, I suppose, are covered by the previous amendments.

Sri C. J. MUCKANNAPPA.—Is the Mover speaking on both, the amendments and the motion ?

Mr. SPEAKER.—Amendments have not been moved.

ಶ್ರೀ ಗಾಂಜಿ ವೀರಪ್ಪ.—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದವರು ಕಳೆದ ವರ್ಷ ಮಾಡಿರುವ ತಕ್ಕ ಕೆಲಸಕಾರ್ಯಗಳನ್ನೂ ಮತ್ತು ಹಾಲಿ ವರ್ಷದಲ್ಲಿ ಆ ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಬರುವುದಕ್ಕೆ ಯಾವ ಯಾವ ಯೋಜನೆಗಳನ್ನು ಕೈಕೊಂಡಿದ್ದಾರೆಂಬುದನ್ನೂ ನಿವೇದನೆ ಮಾಡಿದ್ದಾರೆ. ಅವರ ಭಾಷಣವನ್ನು ನೋಡಿದರೆ, ಸರ್ಕಾರದ ರೀತಿ ನೀತಿಗಳು ಮತ್ತು ಮಾಡಿರತಕ್ಕ ಕೆಲಸಕಾರ್ಯಗಳು ದೇಶದ ಪ್ರಗತಿಯ ದೃಷ್ಟಿಯಿಂದ ಮಾಡಿರುವುಗಳಾಗಿವೆಯೆಂದು ತಿಳಿದುಕೊಳ್ಳಬಹುದು. ಎದುರು ಪಕ್ಷದ ಮಾನ್ಯ ಸದಸ್ಯರುಗಳು ಅವರ ಭಾಷಣವನ್ನು ಸ್ವಲ್ಪ ವಿಚಕ್ಷಣೆಯಿಂದ, ತೆರೆದ ಮನಸ್ಸಿನಿಂದ ಓದುವುದಾದರೆ ಬಹುಮಟ್ಟಿಗೆ ಅವರ ನಿರ್ಧಾರಗಳೇನಿವೆ, ಅವರ ಟೀಕೆ ಟಿಪ್ಪಣಿಗಳೇನಿವೆ ಅವು ಅಷ್ಟಾಗಿ ಇರಲಾರವು ಎಂದು ಭಾವಿಸುತ್ತೇನೆ. ಇಂಥ ಭಾಷಣಕ್ಕಾಗಿ ನಾವೆಲ್ಲರೂ ಅವರನ್ನು ಅಭಿನಂದಿಸಬೇಕಾದ್ದು ಅಗತ್ಯ.

ಪ್ರಥಮತಃ ರಾಜಪಾಲರು ಹೇಳಿದ್ದಾರೆ.—ನಾವು ಮೂರನೆಯ ಪಾಂಚವಾರ್ಷಿಕ ಯೋಜನೆಯ ಎರಡ

ನೆಯ ವರ್ಷದಲ್ಲಿದ್ದೇವೆ. ಒಂದನೆಯ ವರ್ಷದಲ್ಲಿ ನಾವು ನಿರೀಕ್ಷೆಮಾಡಿದ್ದಕ್ಕಿಂತಲೂ ಹೆಚ್ಚಿಗೆ ಸಾಧನೆ ಮಾಡಿದ್ದೇವೆ. ಯಾವ ಯಾವ ಭಾಗದಲ್ಲಿ ಎಷ್ಟು ಹೆಚ್ಚು ಹಣ ಖರ್ಚಾಗಿದೆ, ಆಗಬೇಕಾದ ಪ್ರಗತಿ ಯೇನಿದೆ ಯೆಂಬದನ್ನು ಯೋಚನೆಮಾಡಿದರೆ, ನಮ್ಮ ಸರ್ಕಾರದವರು ಎಲ್ಲಾ ಕ್ಷೇತ್ರದಲ್ಲೂ ಎಲ್ಲರಿಗೂ ತೃಪ್ತಿ ಯಾಗುವಂತೆ ಬಹಳ ಕೆಲಸ ಕಾರ್ಯಗಳನ್ನು ಮಾಡಿ ದ್ದಾರೆ. ಈ ದೇಶ ಈ ಕೆಲವೇ ವರ್ಷಗಳಲ್ಲಿ ಇಷ್ಟೊಂದು ಪ್ರಗತಿಯನ್ನು ಸಾಧನೆಮಾಡಿದೆಯೆಂದರೆ ಅದು ಯಾರಿಗಾದರೂ ಹೆಮ್ಮೆ ತರತಕ್ಕ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಕೇವಲ ಟೀಕೆಮಾಡ ಬೇಕೆಂಬ ಉದ್ದೇಶದಿಂದ ಟೀಕೆ ಮಾಡಬಹುದೇ ವಿನಾ ನಿಜವಾಗಿಯೂ ಏನ್ನೂಹೇಳಲಾರರು. ಅಂಕಿ ಅಂಶ ಗಳನ್ನು ಅವರೇ ನೋಡಲಿ. ಎರಡನೆಯ ಪಾಂಚ ವಾರ್ಷಿಕ ಯೋಜನೆಯ outlay 47 ಕೋಟಿ ರೂಪಾಯಿಗಳೆಂದು ರಾಜ್ಯಪಾಲರು ಹೇಳಿದ್ದಾರೆ, ಕೇಂದ್ರ ಸರ್ಕಾರದವರು ನಮ್ಮ ರೆವಿನ್ಯೂ gapನ್ನು ಭರ್ತಿಮಾಡುವುದಕ್ಕೆ ಹೇರಳವಾಗಿ ಹಣ ಕೊಟ್ಟು ಸಹಾಯಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಎಷ್ಟು ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನು ತೆಗೆದುಕೊಂಡು ಈ ಯೋಜನೆಯನ್ನು ಯಶಸ್ವಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಅಂಕಿ ಅಂಶಗಳಿಂದ ವ್ಯಕ್ತಪಾಗುತ್ತದೆ.

Sri C. J. MUCKANNAPPA.—Sir, may I draw the attention of the Hon'ble Chair to Rule (20) about amendments? Hitherto, the procedure used to be to place all the amendments before the House and then the Motion together with the amendments used to be discussed on the floor of the House. Now, the Mover of the Motion of Thanks has been called upon to speak. May I know what is the procedure we are going to follow?

Mr. SPEAKER.—I have looked up the previous proceedings in this behalf and I found that after the Mover delivered his speech the amendments were taken up in the order in which they were given. The Mover has not finished his speech. After that is over, the amendments will be taken up.

Sri G. VENKATAI GOWDA.—Sir no doubt they will be moved, but he must know what the amendments are in order to enable him to make a comparative statement.

Mr. SPEAKER.—He has got the right of reply. If the idea is that the amendments will be moved one after another and speeches will be delivered, that is not correct. The procedure is that the motion is moved, it is seconded and the Mover delivers his speech. After that, the amendments are taken up and all of them are put simultaneously and the debate comes to an end.

ಶ್ರೀ ಗಾಂಜಿ ವೀರಪ್ಪ.—ಸ್ವಾಮಿ, ಈ ಯೋಜನೆ ಯಲ್ಲಿ ನಾವು ಕೆಲವು ಮುಖ್ಯಾಂಶಗಳನ್ನು ಮಾತ್ರ ಉಲ್ಲೇಖಿಸಿದರೆ ಸಾಕು ಎಂದು ನನಗೆ ಕಾಣುತ್ತದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರ ಇದು ವರೆಗೂ ಮಾಡಿರುವ ಕೆಲಸವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಎಲ್ಲ ವಿಚಾರಗಳ ಮೇಲೆ ಮಾತನಾಡದೆ ಕೆಲವು ಮುಖ್ಯಾಂಶಗಳ ಮೇಲೆ ಮಾತ್ರ ನನ್ನ ಅಭಿಪ್ರಾಯಗಳನ್ನು ಮತ್ತು ಇತರ ಕೆಲವು ಅಂಶಗಳನ್ನು ಈ ಸಭೆಯ ಮುಂದಿಡಲು ಅಪ್ಪಣೆ ಕೇಳುತ್ತೇನೆ.

ಮೊದಲನೆಯದಾಗಿ ನಾನು ಶರಾವತಿ ಪ್ರಾಜೆಕ್ಟ್ ವಿಷಯದಲ್ಲಿ ಮಾತನಾಡುತ್ತಾ, ಒಂದು ಮಾತನ್ನು ಹೇಳಬೇಕಾಗಿದೆ. ನನ್ನ ಸ್ನೇಹಿತರಾದ ಶ್ರೀಮಾಜಿ ಗೋಪಾಲಗೌಡರು ಮತ್ತು ಇತರರು ಈ ಯೋಜನೆ ಅದರ ಅವಧಿಯೊಳಗೇ ಪೂರ್ತಿಯಾಗುತ್ತದೋ ಇಲ್ಲವೋ ಎಂಬುದಾಗಿ ಒಂದು ಸಂಶಯವನ್ನು ವ್ಯಕ್ತಪಡಿಸಿದರು. ಈ ಶರಾವತಿ ಯೋಜನೆ ನಮ್ಮ ಮೈಸೂರು ಸಂಸ್ಥಾನಕ್ಕೇ ಅಲ್ಲ, ಭರತ ಖಂಡದಲ್ಲಿ ಯೇ ಬಹಳ ದೊಡ್ಡ ಯೋಜನೆ. ಇಡಿ ಭರತಖಂಡದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಪ್ರಮಾಣದಲ್ಲಿ ಕೊಡತಕ್ಕ ಯೋಜನೆಯೆಂದರೆ ಈ ಶರಾವತಿ ಯೋಜನೆ. ಕೇಂದ್ರ ಸರ್ಕಾರದವರು ಈ ಯೋಜನೆಯನ್ನು ಈ ವರ್ಷದ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಹೇಳಿ ನಮ್ಮ ಮೈಸೂರು ಸರ್ಕಾರದವರು ಬಹಳ ವಿಧವಾಗಿ ಪ್ರಯತ್ನ ಮಾಡಿದರು. ಆದ್ದರಿಂದ ಅದನ್ನು ಈ ವರ್ಷ ಸೇರಿಸಿದ್ದಾರೆ. ಅದರ ಪ್ರಗತಿ ನೋಡಿದರೆ ಈ ಶರಾವತಿ ಯೋಜನೆಯ ಕೆಲಸ ಕಾರ್ಯಗಳು ಈಚೆಗೆ ಬಹಳ ತುರ್ತಾಗಿ ನಡೆಯುತ್ತಿವೆ ಎಂಬುದಾಗಿ ನಾನು ತಿಳಿದಿದ್ದೇನೆ. ಸರ್ಕಾರದವರು ಈ ವರ್ಷ ಈ ಯೋಜನೆಗಾಗಿ 23 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಇಟ್ಟು ಕೊಂಡಿದ್ದಾರೆ. ಈ 23 ಕೋಟಿ ರೂಪಾಯಿಗಳಲ್ಲಿ ಮೈಸೂರು ಸರ್ಕಾರ ದವರದು 19 ಕೋಟಿ ರೂಪಾಯಿಗಳು ಬಾಕಿ ಹಣ ಕೇಂದ್ರ ಸರ್ಕಾರದಿಂದ ಬರುತ್ತದೆಂಬುದಾಗಿ ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಪ್ಲಾನಿಂಗ್ ಕಮಿಷನ್ನಿನವರೂ ಕೂಡ ಈ ಯೋಜನೆಯಿಂದ ಬೇಕಾ ದಷ್ಟು ಜನತೆಗೆ ಉಪಯೋಗವಿದೆಯೆಂಬುದಾಗಿ ತಿಳಿದು ಸುಮಾರು 6½ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಕೊಡಬೇಕೆಂದು ಶಿಪಾರ್ಸು ಮಾಡಿದ್ದಾರೆ. ಈ ಹಣವನ್ನು ವಿತಕ್ಕೋನ್ಮರ ಅವರು ಕೊಟ್ಟಿದ್ದಾರೆಂದರೆ ನಾವು ನಿರೀಕ್ಷಿಸಿದ್ದಕ್ಕಿಂತ ಬಹಳ ಜಾಗ್ರತೆಯಾಗಿಯೇ ಈ ಯೋಜನೆ ಪೂರ್ತಿಯಾಗಲಿ ಎಂಬ ಉದ್ದೇಶದಿಂದ ಪ್ಲಾನಿಂಗ್ ಕಮಿಷನ್ನಿನವರು ಅಷ್ಟು ಹಣವನ್ನು ನಮಗೆ ಕೊಡಲು ಶಿಪಾರ್ಸುಮಾಡಿ ದ್ದಾರೆ. ಈ ದೃಷ್ಟಿಯಿಂದ ನಾವು ಯೋಜನೆಮಾಡುವು ದಾದರೆ ಈ ಶರಾವತಿ ಯೋಜನೆಯಿಂದ 1963ನೇ ಡಿಸೆಂಬರ್‌ನೊಳಗೆ ನಾವು ಯೋಚಿಸಿದಂತೆ ಒಂದು ಲಕ್ಷ 78 ಸಾವಿರ ಕಿಲೊವಾಟ್ ಪವರ್ ನಮಗೆ ಬರ ಬೇಕು. ಅದು ಮೊದಲನೆಯ ಹಂತ ಅಥವಾ ಸ್ಟೇಜು. 1963ನೇ ಡಿಸೆಂಬರ್-ಏಕೆ ನನಗೆ ತಿಳಿದಿರುವಹಾಗೆ ಬಹುಶಃ 1963ನೇ ಡಿಸೆಂಬರ್ ಗಿಂತ ಮುಂಚೆಯೇ ಅಷ್ಟು ವಿದ್ಯುಚ್ಛಕ್ತಿ ನಮಗೆದೊರೆತು ಈಗೇನು ವಿದ್ಯು ಚ್ಛಕ್ತಿಕೊರತೆ ನಮಗಿದೆಯೋ ಅಷ್ಟು ನೀಗ ಬಹುದೆಂಬ ಕುತೂಹಲ ಮತ್ತು ನಂಬಿಕೆಗಳನ್ನುನಾವು ಇಟ್ಟುಕೊಳ್ಳ

(ಶ್ರೀ ಗಾಂಜಿ ವೀರಪ್ಪ)

ಬಹುದು. ಆದರೆ ಈಗ ವಿದ್ಯುಚ್ಛಕ್ತಿಯ ಕೊರತೆ ಇರುವುದರಿಂದ ಎಷ್ಟೋ ಕೈಗಾರಿಕೆಯ ಸಂಸ್ಥೆಗಳು, ಇತರ ದೊಡ್ಡ ಕೈಗಾರಿಕೆಗಳ ಪ್ರಗತಿ ಸ್ವಲ್ಪ ನಿಂತು ಹೋಗಿದೆ. ಇಷ್ಟರಮಟ್ಟಿಗೆ ನಮಗೆ ಮೊದಲನೆಯ ಸ್ಟೇಜಿನಲ್ಲಿ ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದಲ್ಲಾ ಎಂಬುದನ್ನು ತಿಳಿದು ನಮ್ಮ ಸ್ನೇಹಿತರು ಸಂತೋಷ ಪಡಬೇಕು. ಇಂತಹ ಪ್ರಗತಿಯನ್ನು ಬೆಂಬಲಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಪ್ರಗತಿ ?

ಶ್ರೀ ಗಾಂಜಿ ವೀರಪ್ಪ.—ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈಗ ಈ ಯೋಜನೆಗಾಗಿ ನಮಗೆ ಬರುತ್ತಿದ್ದ ಮೆಷನರಿಗಳ ಒಂದು ಹಡಗು ಮುಳುಗಿ ಹೋಗಿದ್ದರೂ ಇಲ್ಲಿರತಕ್ಕ ಮೆಷಿನರಿಗಳಿಂದಲೇ ಈ ಈ ಯೋಜನೆಯ ಪ್ರಗತಿಯನ್ನು ಸ್ಥಾಪಿಸುತ್ತಿರುವುದೇ ಸರ್ಕಾರದ ಅಡಳಿತದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಶರಾವತಿ ಯೋಜನೆಯ ಪ್ರಗತಿಯನ್ನು ಬಹಳ ಜನ ನಿರೀಕ್ಷಣೆ ಮಾಡುತ್ತಿದ್ದಾರೆ. ನಿರೀಕ್ಷಿಸಿದಂತೆ ಅಲ್ಲಿನ ಕೆಲಸಕಾರ್ಯಗಳು ಜಾಗ್ರತೆಯಾಗಿ ಆಗುತ್ತವೆಯೋ ಇಲ್ಲವೋ ಎಂಬುದಾಗಿ ಶ್ರೀವರ್ಮಾ ಗೋಪಾಲಗೌಡರು ಬಹಳವಾಗಿ ಆತುರಪಡುತ್ತಿದ್ದಾರೆ. ಅದರ ಪ್ರಗತಿಯನ್ನು ಹಂತ ಹಂತವಾಗಿ ಕಾದು ನೋಡಬೇಕು. ಖಂಡಿತವಾಗಿ ಅದರ ಪ್ರಗತಿ ಬಹಳ ಚೆನ್ನಾಗಿ ಆಗುತ್ತದೆಂಬುದಾಗಿ ಅವರು ಸಮಾಧಾನ ಪಟ್ಟುಕೊಳ್ಳಬಹುದು.

ಒಬ್ಬ ಸದಸ್ಯರು.—ಮಾನ್ಯ ಮಂತ್ರಿಗಳು ಮಾತನಾಡುತ್ತಾ ಫಸ್ಟ್‌ಸ್ಟೇಜಿನಲ್ಲಿ 89 ಸಾವಿರದ ನೂರು ಕಿಲೊವಾಟ್ ಪವರ್ 1963ರ ರೊಳಗೆ ಇದರಿಂದಾಗುತ್ತದೆಂದು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ನಿನ್ನೆ ಹೇಳಿದ್ದು ಒಂದು ಯೂನಿಟ್ ಜನರೇಟಿಂಗ್ ಕೆಪಾಸಿಟಿ 89,100 ಕಿಲೊವಾಟ್ ಇಂತಹ ಎರಡು ಯೂನಿಟ್ಟುಗಳನ್ನು ಹಾಕುವುದು ಫಸ್ಟ್‌ಸ್ಟೇಜ್ ಪ್ರೋಗ್ರಾಂ ಎಂದು.

ಶ್ರೀ ಗಾಂಜಿ ವೀರಪ್ಪ.—ಶರಾವತಿ ಯೋಜನೆಯ ವಿಚಾರವನ್ನು ಈ ಸಭೆಯ ಮುಂದೆ ಹೇಳುತ್ತಿದ್ದೆ. ಆ ಯೋಜನೆಯ ಕೆಲಸಕಾರ್ಯಗಳು ಬಹಳಯಶಸ್ವಿಯಾಗಿ ನಡೆಯುತ್ತಿವೆ. ಮುಖ್ಯವಾಗಿ ಆ ಯೋಜನೆ ಅತಿಜಾಗ್ರತೆ ಪೂರ್ವಕವಾಗಿ ನಮ್ಮ ದೇಶದ ಕಲ್ಯಾಣವಾಗಿ ಒಳ್ಳೆಯ ಪ್ರಗತಿಯಾಗಲೆಂದು ನಾನು ಹೇಳಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಯೋಚನೆಮಾಡುವುದಾದರೆ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕದ್ದು ಬರೀ ಈ ಶರಾವತಿ ಯೋಜನೆ ಒಂದರಿಂದಲೇ ಅಲ್ಲ. ಅದರ ಜೊತೆಗೆ ಇನ್ನೂ ಎರಡು ಯೋಜನೆಗಳಿಂದ ನಮಗೆ ಎಷ್ಟೋ ವಿದ್ಯುಚ್ಛಕ್ತಿ ಸರಬರಾಯಿಬರುವ ನಿರೀಕ್ಷಣೆ ಇದೆ. ಅವು ತುಂಗಭದ್ರಾ ಮತ್ತು ಭದ್ರಾ ಯೋಜನೆಗಳಿಂದ. ಇವುಗಳಿಂದ 60-70 ಸಾವಿರ ಕಿಲೊವಾಟ್ ಪವರ್ ಬರಬೇಕು. ನುಮಾರು ಒಂದೊಂದು ಯೋಜನೆಯಿಂದ 27 ಸಾವಿರ ಕಿಲೊವಾಟ್ಸ್ ಪವರ್ ಬರುತ್ತದೆ. 50-60 ಸಾವಿರ ಕಿಲೊವಾಟ್ಸ್ ವಿದ್ಯುಚ್ಛಕ್ತಿ ಶರಾವತಿ ಯೋಜನೆಯ ಜೊತೆಗೆ ಬರುವ ನಿರೀಕ್ಷಣೆ ಇದೆ. ಆದರೂ ವಿದ್ಯುಚ್ಛಕ್ತಿ ನಿವಾರಣೆ ಗೋನ್ಯರ.....

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿದ್ಯುಚ್ಛಕ್ತಿ ಅಭಾವ ನಿವಾರಣೆಗೂ ವಿದ್ಯುಚ್ಛಕ್ತಿ ನಿವಾರಣೆಗೂ ಬೇಕಾದಷ್ಟು ವ್ಯತ್ಯಾಸವಿದೆ.

ಶ್ರೀ ಗಾಂಜಿ ವೀರಪ್ಪ.—ವಿದ್ಯುಚ್ಛಕ್ತಿ ಅಭಾವ ನಿವಾರಣೆ ಎಂದು ಮಾನ್ಯಸದಸ್ಯರು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಈ ವಿದ್ಯುಚ್ಛಕ್ತಿ ಕೊರತೆಯ ನಿವಾರಣೆಗೆ ಇಷ್ಟೊಂದು ತೊಂದರೆಯಿದೆ ಎಂಬುದನ್ನು ಅರಿತು ಕೂಡ ಇದ್ದುದರಲ್ಲಿ ಅದನ್ನು ಸರಿಪಡಿಸಿಕೊಂಡು ಸಣ್ಣ ಪುಟ್ಟ ಕೈಗಾರಿಕೆಗಳನ್ನು ಹೊಸದಾಗಿ ಮಾಡುವವರಿಗೆ ಸ್ವಲ್ಪಮಟ್ಟಿಗಾದರೂ ವಿದ್ಯುಚ್ಛಕ್ತಿಯನ್ನು ಹೇಗಾದರೂ ಮಾಡಿ ಒದಗಿಸಲೇ ಬೇಕಾದ ಸಂದರ್ಭಗಳು ಎಷ್ಟೋ ಬರುತ್ತವೆ. ಅಂಥ ಮೇರೆ ಅಂತ ಹವರಿಗೆ ನಮ್ಮಲ್ಲಿ ಈಗ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲು ವಿದ್ಯುಚ್ಛಕ್ತಿ ಉತ್ಪಾದನೆಯಾಗಿಲ್ಲವೆಂದು ಹೇಳಿದರೆ ಆಗ ಅವರ ಮನಸ್ಸಿಗೆ ತುಂಬಾ ನಿರುತ್ಸಾಹವಾಗುತ್ತದೆ. ಆ ರೀತಿ ಕೇಳುವವರಿಗೆ ಅಲ್ಪ ಸ್ವಲ್ಪವಾದರೂ ವಿದ್ಯುಚ್ಛಕ್ತಿಯನ್ನು ಕೊಟ್ಟು ಅವರ ಕೈಗಾರಿಕೆ ಯಶಸ್ವಿಯಾಗಿ ನಡೆಯಲೆಂದು ಸ್ಟಾರಿಂಗ್ ಸಿಸ್ಟಂ ಎಂದು ಮಾಡಿದ್ದಾರೆ. ಆದೃಷ್ಟಿಯಿಂದಾದರೂ ನಮಗಿರತಕ್ಕ ಕೊರತೆ ಸ್ವಲ್ಪ ಮಟ್ಟಿಗಾದರೂ ನಿವಾರಣೆಯಾಗುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಸರಬರಾಯಿಯ ವಿಷಯದಲ್ಲಿ ರಾಜ್ಯಪಾಲರು ಬಹು ಚೆನ್ನಾಗಿ ಅಪ್ಪಣೆ ಕೊಡಿಸಿದ್ದಾರೆ. ಈಗ ನಮ್ಮ ದೇಶದಲ್ಲಿ ಮುಖ್ಯವಾಗಿ ಪ್ರಗತಿಯಾಗಬೇಕಾದರೆ ಸುಖೀ ರಾಜ್ಯ ಮಾಡಬೇಕು. ಎಲ್ಲರಿಗೂ ದೇಶದಲ್ಲಿ ಸಮಾನಾವಕಾಶವಿರಬೇಕು. ಎಲ್ಲರಿಗೂ ಕಲ್ಯಾಣವಾಗಬೇಕು. ಈಗ ನಾವು ಸಮತಾವಾದಿ ಸಮಾಜ ರಚನೆಯಾಗಬೇಕು ಎಂದು ಪದೇ ಪದೇ ಹೇಳುತ್ತಿದ್ದೇವೆ. ಅದೇ ಮಾತನ್ನು ತಿರುಗಿಸಿ ನಮ್ಮ ಸ್ನೇಹಿತರು ಮಾತನಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಇನ್ನು ರಾಷ್ಟ್ರೀಯ ವಿಸ್ತರಣೆ ಯೋಜನೆಗಳ ಬಗ್ಗೆ ಬಹಳವಾಗಿ ನನ್ನ ಸ್ನೇಹಿತರು ಟೀಕೆಗಳನ್ನು ಮಾಡಿದರು. ನಾವು ಈಗ ಕೈಗೊಳ್ಳುತ್ತಿರುವ ರಾಷ್ಟ್ರೀಯ ವಿಸ್ತರಣೆ ಯೋಜನೆಗಳಲ್ಲಿ ಕೇವಲ ಜೀಪುಗಳು ಓಡಾಡುತ್ತಿವೆಯೇ ವಿನಾ ಇನ್ನೇನೂ ಇಲ್ಲವೆಂಬುದಾಗಿ ಟೀಕೆ ಮಾಡಿದರು. ಇದು ಸರಿಯಲ್ಲ. ಜೀಪುಗಳು ಬೇಕೇ ಬೇಕು. ಹಳ್ಳಿಗಳಿಗೆ ಹೋಗಿ ಕೆಲಸ ಮಾಡಬೇಕಾದರೆ ಆಫೀಸರುಗಳು ಬೇಕು. ಅವೆಲ್ಲಾ ಬೇಡ, ಹಾಗೆಯೇ ರಾಷ್ಟ್ರೀಯ ವಿಸ್ತರಣೆ ಯೋಜನೆಗಳು ಆಗಬೇಕು ಎಂದರೆ ಹೇಗೆ ? ಆ ರೀತಿ ಯಾದಂಥ ಅಭಿಪ್ರಾಯ ಎಷ್ಟು ಆಧಾರರಹಿತವಾಗಿದೆಯೆಂಬುದನ್ನು ನಾವು ಯೋಚನೆ ಮಾಡಬೇಕು. ಸುಖೀರಾಜ್ಯ ಸ್ಥಾಪನೆ ಗೋಸ್ಕರ ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದ ಹಾಗೆ ದೇಶದಲ್ಲಿ ಇತ್ತೀಚೆಗೆ ಪ್ರಗತಿ ಎದ್ದು ಕಾಣತ್ತಿದೆ, ಎಷ್ಟೋ ಹೊಸ ಹೊಸ ಯೋಜನೆಗಳನ್ನು ಮಾಡುತ್ತಿದ್ದೇವೆ. ನ್ಯಾಷನಲ್ ಎಕ್ಸ್‌ಟೆಕ್ಷನ್ ಸ್ಕೀಂ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳನ್ನು ನಾನಾ ಕಡೆಗಳಲ್ಲಿ ಮಾಡುತ್ತಿದ್ದೇವೆ.

ಹಳ್ಳಿಗಳನ್ನು ಉದ್ಧಾರಮಾಡದಿದ್ದರೆ ರಾಷ್ಟ್ರದ ಪ್ರಗತಿಯಾಗುವುದಿಲ್ಲ. ಬಹು ಭಾಗದ ಜನರು ಅಲ್ಲಿ ಇದ್ದಾರೆ. ಅದರ ಸುಧಾರಣೆ ಯಾಗಬೇಕಾದರೆ ರಾಷ್ಟ್ರೀಯವಿಸ್ತರಣಾ ಯೋಜನೆಯನ್ನು ಬಿಟ್ಟರೆ ಇನ್ನು ಯಾವಯೋಜನೆಯಿಂದಲೂ ಆಗುವುದಿಲ್ಲ. ಇಷ್ಟೊಂದು ಜಾಣ್ಮೆಯಿಂದ ಯೋಜನೆ ಮಾಡಿ ಬೇಕಾದಷ್ಟು ಹಣ ಖರ್ಚುಮಾಡಿ, ಯಶಸ್ವಿಯಾಗಿ ಮಾಡಬೇಕೆನ್ನುವ ಮನೋಭಾವ ಇರುವಾಗ ಜನರಲ್ಲಿ ಸಹಕಾರಿ ಮನೋಭಾವ ಬರಬೇಕು. ಯಾವ ಕೆಲಸ ಮಾಡಬೇಕಾದರೂ ಮೊದಲು ಇದು ಸರ್ಕಾರದ ಕೆಲಸ ಎಂದು ಹೇಳಿ ಯಾರೂ ಕೈಹಾಕುತ್ತ ಇರಲಿಲ್ಲ. ನಮ್ಮ ದೇಶ, ನಮ್ಮ ಕೆಲಸ, ನಮ್ಮ ಪ್ರಗತಿ ಆಗಬೇಕೆಂಬ ಮನೋಭಾವ ಬೆಳೆಯಲಿ ಎಂಬ ಉದ್ದೇಶದಿಂದ ಈ ರಾಷ್ಟ್ರೀಯ ವಿಸ್ತ

ರಣಾ ಯೋಜನೆ, ಕಮ್ಯುನಿಟಿ ಡೆವಲಪ್‌ಮೆಂಟ್ ಯೋಜನೆ ಇವುಗಳನ್ನೆಲ್ಲಾ ಮಾಡಿ ಸರ್ಕಾರದವರು ಯಶಸ್ವಿಯಾಗಿ ಕೆಲಸ ಮಾಡುತ್ತಾ ಇದ್ದಾರೆ. ಇದರಿಂದ ಗ್ರಾಮಾಂತರದಲ್ಲಿ ಬೇಕಾದಷ್ಟು ಕೆಲಸ ಆಗಿದೆ. ಮೊನ್ನೆ ತಾನೆ ಚುನಾವಣೆ ಆಗಿದೆ, ಕಾಂಗ್ರೆಸ್ ಸರ್ಕಾರ ಬಹಳ ಕೆಲಸಮಾಡಿದೆ. ಅಂಥಾ ಸರ್ಕಾರವನ್ನು ಎದುರು ಹಾಕಿಕೊಳ್ಳುವುದಕ್ಕೆ ಟೀಕೆ ಮಾಡುತ್ತಾರೆಯೇ ಹೊರತು, ಕಣ್ಣಿದ್ದವರು ಯೋಜನೆ ಮಾಡಿ ನೋಡಿದರೆ ಅದರ ಪ್ರಗತಿ ಕಾಣುತ್ತದೆ. ಅನೇಕ ಗ್ರಾಮಗಳಿಗೆ ರಸ್ತೆಗಳೇ ಇರುವುದಿಲ್ಲ. ಸರ್ಕಾರದವರೇ ಎಲ್ಲಾ ಹಣ ಖರ್ಚುಮಾಡುವುದಕ್ಕಾಗುವುದಿಲ್ಲ. ಗ್ರಾಮದವರು ಕೂಡ ಸ್ವಲ್ಪ ಭಾಗ ಸೇರಿಸಿದರೆ, ಅದು ನಮ್ಮದು ಎಂಬ ಮನೋಭಾವ ಬರುತ್ತದೆ. ಸರ್ಕಾರದವರು ಅವರು ಕೊಡುವುದಕ್ಕಿಂತ ಇನ್ನು ಸ್ವಲ್ಪ ಹೆಚ್ಚು ಖರ್ಚು ಮಾಡಬಹುದು. ಶೇಕಡ 75ಕ್ಕೆ 100 ಭಾಗ ಖರ್ಚು ಮಾಡಬಹುದು. ಇದರಲ್ಲಿ ಗ್ರಾಮದವರಿಗೆ ಈ ಕೆಲಸ ನಮ್ಮದು ಎಂಬ ಮನೋಭಾವ ಬೆಳೆಯಲಿ ಎಂಬುದೇ ಮುಖ್ಯವಾದ underlying principle. ಆ ದೃಷ್ಟಿಯಿಂದ ರಾಷ್ಟ್ರೀಯ ವಿಸ್ತರಣಾ ಯೋಜನೆ ಮಾಡಿದ್ದಾರೆ. ದೇಶದಲ್ಲಿ ಈಗಾಗಲೇ 220 ಬ್ಲಾಕ್‌ಗಳನ್ನೂ ಪ್ರಾರಂಭ ಮಾಡಿದ್ದಾರೆ. ಮತ್ತು ಇನ್ನೂ 39 ಬ್ಲಾಕುಗಳನ್ನು ಪ್ರಾರಂಭ ಮಾಡಬೇಕೆಂದು ಯೋಚನೆ ಮಾಡಿದ್ದಾರೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಪ್ರಜಾಪ್ರಭುತ್ವ ಬಂದ ಮೇಲೆ ಅಧಿಕಾರದ ಅನುಭವ ಬಂತು. ಅನುಭವ ಪಡೆದು ರಾಷ್ಟ್ರದ ಆಡಳಿತವನ್ನು ದಕ್ಷತೆಯಿಂದ ನಡೆಸಬೇಕೆಂದು, ಅಧಿಕಾರ ವಿಕೇಂದ್ರೀಕರಣವಾಗಲಿ ಎಂಬ ದೃಷ್ಟಿಯಿಂದ ಪಂಚಾಯ್ತಿ ರಾಜ್ಯವನ್ನು ಸ್ಥಾಪನೆ ಮಾಡಲಾಯಿತು. ಅದರಿಂದಲೇ ರಾಮರಾಜ್ಯ ವಾಗುತ್ತದೆ, ಪ್ರಜೆಗಳು ಭಾಗವಹಿಸಬೇಕು. ಅದು ಅನುಷ್ಠಾನಕ್ಕೆ ಬರಬೇಕು ಎಂದು ಮಹಾತ್ಮಾ ಗಾಂಧಿಯವರು ಹೇಳುತ್ತಾ ಇದ್ದರು. ಅದೇ ರೀತಿ ಯಾಗಿ ಗ್ರಾಮಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ವಿರಬೇಕು; ತಮ್ಮ ಒಂದು ಹಳ್ಳಿಗಳ ಗುಂಪಿಗೆ ತಾವೇ ಅಧಿಕಾರ ಮಾಡಬೇಕೆಂಬ ದೃಷ್ಟಿಯಿಂದ ಗ್ರೂಪ್ ಪಂಚಾಯ್ತಿಗಳು ಎಂದು ಮಾಡಿದ್ದಾರೆ. ಅದಕ್ಕೆ ಮೊದಲು ಏನೇನೂ ಅಧಿಕಾರವಿರಲಿಲ್ಲ. ಹಣ ಕೂಡ ಇರಲಿಲ್ಲ. ಪಂಚಾಯ್ತಿ ರಾಜ್ಯವಾಗಬೇಕೆಂದು ಪಂಚಾಯ್ತಿಗಳು ನಿರ್ಣಯ ಮಾಡಿ ಹೆಚ್ಚಿನ ಅಧಿಕಾರ ಕೊಟ್ಟು ತನ್ಮೂಲಕ ಪ್ರಗತಿ ಸಾಧನೆ ಮಾಡುವುದಕ್ಕೆ ತರಬೇತಿ ಕೊಡುತ್ತಾ ಇದ್ದಾರೆ. ಅದೇ ರೀತಿ ತಾಲ್ಲೂಕು ಬೋರ್ಡು ಆಗುತ್ತಾ ಇದೆ. ಮೊನ್ನೆ ತಾನೆ ಚುನಾವಣೆ ಗಳಾಗಿ ತಾಲ್ಲೂಕು ಬೋರ್ಡುಗಳು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಾ ಇವೆ. ಅಲ್ಲೂ ಕಾಂಗ್ರೆಸ್ ಪಕ್ಷದವರೇ ಹೆಚ್ಚಾಗಿ ಬಂದು ಯಶಸ್ವಿಯಾಗಿ ಕೆಲಸ ಮಾಡುತ್ತಾ ಇದ್ದಾರೆ. ಎಂದರೆ ಕಾಂಗ್ರೆಸ್ ಪಕ್ಷದವರು, ತಾಲ್ಲೂಕುಬೋರ್ಡು ಮತ್ತು ಪಂಚಾಯ್ತಿಗಳಲ್ಲಿ ಎಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಇದೇ ಒಂದು ನಿದರ್ಶನ. Welfare Stateನ ideal ಏನಿದೆ ಅದನ್ನೇ ಸರ್ಕಾರದವರು ಇಟ್ಟುಕೊಂಡು ಸಾಧನೆ ಮಾಡಿ ಪಂಚಾಯ್ತಿ ರಾಜ್ಯ ಮತ್ತು ತಾಲ್ಲೂಕು ಬೋರ್ಡುಗಳ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದಾರೆ. ನಿಜಾಂಶವನ್ನು, ಆಗಿರತಕ್ಕ ಪ್ರಗತಿಯನ್ನು ನೋಡದೇ ಸುಮ್ಮನೆ ಏನೋ ನಡೆಯುತ್ತಿದೆ, ಜೀಪುಗಳು ಓಡುತ್ತವೆ, ಅಧಿಕಾರಿಗಳು ಬರುತ್ತಾರೆ ಎಂದು ಟೀಕೆ ಮಾಡುವುದು ನಿರಾಧಾರವಾದದ್ದು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ಆಗಿರತಕ್ಕ ಪ್ರಗತಿಯ ಬಗ್ಗೆ ಇನ್ನೊಂದು ವಿಷಯವನ್ನು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ: ಗೃಹ ನಿರ್ಮಾಣ ಕಾರ್ಯವನ್ನು ಬಹಳ ಯಶಸ್ವಿಯಾಗಿ ಮಾಡಿರುತ್ತಾರೆ. ಮಾನ್ಯ ಸಭಾಪತಿಗಳೇ, ನಮ್ಮ ದೇಶದಲ್ಲಿ ಆಹಾರ ಎಷ್ಟು ಅಗತ್ಯವಿದೆಯೋ ಅಷ್ಟೇ ನೆರಳು, ವಸತಿಯ ಅಗತ್ಯವೂ ಇದೆ. ನಮ್ಮ ಸರ್ಕಾರದವರ ಸಹಾಯದಿಂದ ಎಷ್ಟೋ ಜನ ಸ್ವಂತ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಲೋ ಇಕಂ ಗ್ರೂಪ್ ಹೌಸಿಂಗ್ ಸ್ಕೀಂ ಎಂದು ಮಾಡಿದ್ದಾರೆ. ನಾವು ದೇಶದಲ್ಲಿ ಯಾವ ಯಾವ ಊರಿಗೆ ಹೋದರೂ ಕೂಡ ಇದನ್ನು ನೋಡಬಹುದು. ಶೇಕಡ 5ರಂತೆ ಬಡ್ಡಿ ದರ ಇರುತ್ತದೆ. ಮತ್ತು 30 ವರ್ಷಗಳ ಅವಧಿ ಇರುತ್ತದೆ. ಇಷ್ಟೊಂದು ಸುಲಭವಾದ ಕಂತುಗಳಲ್ಲಿ ಸಾಲವನ್ನು ತೀರಿಸಿಕೊಂಡು ಸ್ವಂತ ಮನೆ ಮಾಡಿಕೊಂಡು ಜೀವನ ಮಾಡಬಹುದು. ಅನೇಕ ಮಾನ್ಯ ಸ್ನೇಹಿತರು ಈ ಯೋಜನೆಯ ಪ್ರಯೋಜನವನ್ನು ಹೊಂದಿರಬಹುದು ಎಂದು ಕಾಣುತ್ತದೆ. ಇದರಲ್ಲಿ ಸಬ್ಸಿಡೈಸ್ಡ್ ಲೋನ್ಸ್ ಎಂದು ಕೊಡುತ್ತಾರೆ. ದೊಡ್ಡದೊಡ್ಡ ಫ್ಯಾಕ್ಟರಿಗಳವರು-ಉದಾಹರಣೆಗೆ ಕಿರ್ಲೋಸ್ಕರ್ ಫ್ಯಾಕ್ಟರಿಗೆ-ಹೋದರೆ ಗೊತ್ತಾಗುತ್ತದೆ ಅಲ್ಲಿ ಕೂಲಿಗಾರರಿಗೆ ಸೌಕರ್ಯ ಮಾಡಿಕೊಡಬೇಕೆಂದು ಆ ಕಂಪನಿಯವರಿಗೆ ಸಬ್ಸಿಡೈಸ್ಡ್ ಲೋನ್ಸ್ ಕೊಡುತ್ತಾರೆ. ಆ ಹಣವನ್ನು ಕಂಪನಿಯವರು ತೆಗೆದುಕೊಂಡು ಅವರ ಕೂಲಿಗಾರರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಸುಲಭ ಕಂತುಗಳಲ್ಲಿ ವಾಪಸು ಪಡೆಯುತ್ತಾರೆ. ಕೊನೆಗೆ ಮನೆ ಕೂಲಿಗಾರರದೇ ಆಗುತ್ತದೆ. ಇದಕ್ಕೆ ಸರ್ಕಾರದವರು 38 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆ ಮತ್ತು ಸಬ್ಸಿಡೈಸ್ಡ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂಗೆ 12 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಎಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಈ ಗೃಹ ನಿರ್ಮಾಣ ಯೋಜನೆ ಯಶಸ್ವಿಯಾಗುತ್ತಿದೆ ಎಂದು ಕಾಣುತ್ತಿದೆ.

ಸ್ವಾಮಿ, ದೇಶದಲ್ಲಿ ಕುಡಿಯುತಕ್ಕ ದುರಭ್ಯಾಸ ಹೋಗಬೇಕೆಂದು ಸರ್ಕಾರದವರು ಪುನಃ ಪಾನನಿರೋಧವನ್ನು ಮುಂದ್ಯಾ ಜಿಲ್ಲೆಗೆ ಅನ್ವಯ ಮಾಡಿದ್ದಾರೆ. ಮತ್ತು ಮೈಸೂರಿನಲ್ಲಿ ಕೆಲವು ಭಾಗದಲ್ಲಿ ಮಾಡಬೇಕೆಂದು ಮಾಡಿದ್ದಾರೆ. ಇದೇ ರೀತಿ ಕ್ರಮೇಣ ಎಲ್ಲಾ ಜಿಲ್ಲೆಗಳಿಗೂ ಒಂದೇ ರೀತಿಯಾಗಿ ಪಾನನಿರೋಧವನ್ನು ಅನ್ವಯಿಸಬೇಕೆಂದು ಮಾಡಿದ್ದಾರೆ. ಈ ವಿಚಾರದಲ್ಲಿ ಬೇಕಾದಷ್ಟು ಟೀಕೆ ಟಿಪ್ಪಣಿಗಳು ಇರಬಹುದು, ಒಟ್ಟಿನಲ್ಲಿ ನೈತಿಕವಾಗಿ ಜನಗಳು ಕುಡಿದು ಕೆಡಬಾರದು ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಕುಡಿದರೆ ಅಪರಾಧವಲ್ಲ, ಬೇರೆ ಕಡೆ ಕುಡಿದರೆ ಅಪರಾಧವಾಗುತ್ತದೆ ಎಂದು ಹೇಳುತ್ತ ಇದ್ದಾರೆ. ಅದು ನಿಜವಲ್ಲ. ಸರ್ಕಾರದವರಿಗೆ ಎಲ್ಲಾ ಕಡೆಯಲ್ಲೂ ಒಂದೇ ಸಾರಿ ಪಾನನಿರೋಧ ಮಾಡುವುದಕ್ಕೆ ಆರ್ಥಿಕ ದೃಷ್ಟಿಯಿಂದ ಸಾಧ್ಯವಿಲ್ಲ ಎಂದು ಬಿಟ್ಟಿದ್ದಾರೆಯೇ ಹೊರತು ಕೆಲವು ಕಡೆ ಕುಡಿದರೆ ಅಪರಾಧವಾಗುವುದಿಲ್ಲ ಎಂದಲ್ಲ. ಎಲ್ಲಿ ಕುಡಿದರೂ ಅಪರಾಧವಾಗುತ್ತದೆ ಎಂದು ಅವರಿಗೆ ಗೊತ್ತಿದೆ. ಆದ್ದರಿಂದ ಈ ಪಾನನಿರೋಧ ಎಲ್ಲಾ ಕಡೆಯೂ ನಾಲ್ಕಾರುವರ್ಷಗಳಲ್ಲಿ ಆಗಬೇಕೆಂಬ ಧೋರಣೆಯನ್ನು ಇಟ್ಟುಕೊಡಿದ್ದಾರೆ. ರಾಜ್ಯಪಾಲರು ಈ ವಿಷಯದಲ್ಲಿ ಅಪ್ಪಣೆ ಕೊಡಿಸಿರುವುದು ಬಹಳ ಸ್ತೋತ್ರಾರ್ಹವಾದ ವಿಚಾರ.

(ಶ್ರೀ ಗಾಂಜಿ ವೀರಪ್ಪ)

ಇದೇ ರೀತಿ ದೇಶದ ಪ್ರಗತಿ ಆಗಬೇಕಾದರೆ ಹಿಂದು ಳಿದವರು ಅದರಲ್ಲೂ ಕೂಡ scheduled castes and tribes ಅವರ ಪ್ರಗತಿ ಯಾಗಬೇಕೆಂಬ ಉದ್ದೇಶ ದಿಂದ ಸರ್ಕಾರದವರು ಹೆಚ್ಚಾಗಿ ಹಣ ಕೊಡಬೇಕೆಂದು ಅವರಿಗಾಗಿ ಹಣ ಮೀಸಲಾಗಿಡಬೇಕೆಂದು ಹೇಳುತ್ತಿದ್ದಾರೆ. ಆ ತತ್ವವನ್ನನುಸರಿಸಿ ಸರ್ಕಾರದವರು ಅವರ ಪ್ರಗತಿಗಾಗಿ ಕೋಟ್ಯಾಂತರ ರೂಪಾಯಿ ಮೀಸಲಾಗಿಟ್ಟು ಖರ್ಚುಮಾಡುತ್ತ ಇದ್ದಾರೆ. ಅವರ ಪ್ರಗತಿ ಕೂಡ ನಿರೀಕ್ಷಣೆ ಮಾಡಿದ್ದುಕಿಂತ ಹೆಚ್ಚಾಗಿ ಆಗುತಾ ಇದೆ.

Mr. SPEAKER.—Will the Hon'ble Member take some more time?

Sri GANJI VEERAPPA.—Yes.

Mr. SPEAKER.—The House will now rise and meet at 1-00 P.M. on Friday, the 30th March 1962.

The House adjourned at Six of the Clock to meet again at One of the Clock on Friday, the 30th March 1962.